**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1514 |
| 2. | ಮಾನ್ಯ ಸದಸ್ಯರ ಹೆಸರು | : | ಡಾ|| ಎಂ. ಜಿ ಮುಳೆ (ವಿಧಾನ ಸಭೆಯಿಂದ ಕ್ಷೇತ್ರದಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 17.03.2026 |
| 4. | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಸಾಲಿನಲ್ಲಿ ಬೀದರ ಜಿಲ್ಲೆಯಲ್ಲಿ ಕಬ್ಬು ಬೆಳೆದಿರುವ ಒಟ್ಟು ವಿಸ್ತೀರ್ಣ ಎಷ್ಟು ಹೆಕ್ಟೇರ್; | ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರು ವರದಿ ಮಾಡಿರುವಂತೆ ಬೀದರ ಜಿಲ್ಲೆಯಲ್ಲಿ ಒಟ್ಟು 18961.47 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯನ್ನು ಬೆಳೆಯಲಾಗುತ್ತಿದೆ |
| ಆ) | ಕಳೆದ ಮೂರು ವರ್ಷಗಳ ವಿಸ್ತೀರ್ಣದೊಂದಿಗೆ ಹೋಲಿಸಿದರೆ ಕಬ್ಬು ಬೆಳೆ ಪ್ರದೇಶದಲ್ಲಿ ಏರಿಕೆ ಆಗಿದೆಯೇ ಅಥವಾ ಇಳಿಕೆ ಕಂಡಿದೆಯೇ; (ತಾಲ್ಲೂಕುವಾರು ಮತ್ತು ವರ್ಷವಾರು ಮಾಹಿತಿ ನೀಡುವುದು) | ಆರ್ಥಿಕ ಮತ್ತು ಸಾಂಖ್ಯಿಕ ನಿದೇಶನಾಲಯದ ಮಾಹಿತಿಯನ್ವಯ ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯ ತಾಲೂಕು ಮತ್ತು ವರ್ಷವಾರು ಕಬ್ಬಿನ ಬೆಳೆಯ ಪ್ರದೇಶದ ಮಾಹಿತಿ ಈ ಕೆಳಗಿನಂತಿರುತ್ತದೆ. |

**(ವಿಸ್ತೀರ್ಣ :ಹೆಕ್ಟರ್ ಗಳಲ್ಲಿ)**

| ಕ್ರ. ಸಂ | ತಾಲ್ಲೂಕು | 2022-23 | 2023-24 | 2024-25 |
|---|---|---|---|---|
| 1 | ಔರದ | 404.66 | 379.68 | 458.31 |
| 2 | ಬಸವಕಲ್ಯಾಣ | 2859.96 | 3012.91 | 2451.39 |
| 3 | ಭಾಲ್ಕಿ | 5576.56 | 5978.38 | 4199.4 |
| 4 | ಬೀದರ | 8998.03 | 8706.18 | 9466.02 |
| 5 | ಚಿಟಗುಪ್ಪ | 4725.68 | 4071.6 | 3943.48 |
| 6 | ಹುಲಸೂರು | 1043.02 | 399.93 | 798.24 |
| 7 | ಹುಮ್ನಾಬಾದ | 5547.25 | 4016.66 | 3242.76 |
| 8 | ಕಮಲನಗರ | 1178.1 | 949.31 | 958.51 |
| | ಒಟ್ಟು | 30333.26 | 27514.65 | 25518.11 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಜಿಲ್ಲೆಯಲ್ಲಿ ರೈತರಿಗೆ ಹೆಚ್ಚಿನ ಇಳುವರಿ ನೀಡುವ ಸುಧಾರಿತ ಕಬ್ಬಿನ ತಳಿಗಳನ್ನು ಕೃಷಿ ಇಲಾಖೆ ಅಥವಾ ಸ್ಥಳೀಯ ಸಕ್ಕರೆ ಕಾರ್ಖಾನೆಗಳ ಮೂಲಕ ವಿತರಿಸಲಾಗಿದೆಯೇ; ವಿತರಿಸಲಾದ ಪ್ರಮುಖ ತಳಿಗಳ ಹೆಸರುಗಳು ಯಾವುವು; ಅವುಗಳ ವಿತರಣೆಯ ಪ್ರಮಾಣ (ತಾಲ್ಲೂಕುವಾರು) ಎಷ್ಟು; | ರಾಜ್ಯ ಸರ್ಕಾರಿ ಸ್ವಾಮ್ಯದ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರ ವತಿಯಿಂದ ರೈತರಿಗೆ ಉತ್ತಮ ಗುಣಮಟ್ಟದ ಕಬ್ಬಿನ ತಳಿಗಳ ಬೀಜವನ್ನು ಪೂರೈಕೆ ಮಾಡುವ ಸಲುವಾಗಿ ಅಂಗಾಂಶ ಕೃಷಿ ಪ್ರಯೋಗಾಲಯವನ್ನು ಸ್ಥಾಪಿಸಿದ್ದು, ಸದರಿ ಪ್ರಯೋಗಲಯದಿಂದ ಸಿ.ಓ. 86032, ಸಿ.ಓ.11015, ಸಿ.ಓ.ಸಿ 671, ಸಿಓ.18061 ಇತ್ಯಾದಿ ತಳಿಗಳ, ಅಂಗಾಂಶ ಕೃಷಿ ಮುಖಾಂತರ ಸಸಿಗಳನ್ನು ತಯಾರಿಸಿ ಸಕ್ಕರೆ ಕಾರ್ಖಾನೆ ಹಾಗೂ ರೈತರಿಗೆ ರಿಯಾಯತಿ ದರದಲ್ಲಿ ಉತ್ತಮ ಗುಣಮಟ್ಟದ ಬೀಜೋತ್ಪಾದನೆಗಾಗಿ ವಿತರಿಸಲಾಗುತ್ತಿದೆ. ಅದರಂತೆ ಸಂಸ್ಥೆಯ ಫಾರಂಗಳಲ್ಲಿ 03 ಹಂತದ ಬೀಜೋತ್ಪಾದನೆ ಕೈಗೊಂಡು (ಫೌಂಡೇಶನ ಬೀಜ 02 ಹಂತದಲ್ಲಿ & ಪ್ರಮಾಣೀಕೃತ ಬೀಜ) ರೈತರಿಗೆ & ಕಾರ್ಖಾನೆಗಳಿಗೆ ಕಬ್ಬಿನ ಬೀಜವನ್ನು ಪೂರೈಕೆ ಮಾಡಲಾಗುತ್ತಿದೆ. |

<table>
<tr><td></td><td></td><td>ಇದಲ್ಲದೇ, ಕರ್ನಾಟಕ ರಾಜ್ಯ ವ್ಯಾಪ್ತಿ ರೈತರಿಂದ ಹಾಗೂ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆ ಅಭಿವೃದ್ಧಿ ಕುರಿತು ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಲು ಬೇಡಿಕೆಯನುಸಾರ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ತಜ್ಞರನ್ನು ನಿಯೋಜಿಸಿ ರೈತರಿಗೆ ಕಬ್ಬು ಉತ್ಪಾದನೆ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಸ್ತರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಅದರಂತೆ ರಾಜ್ಯವ್ಯಾಪ್ತಿ ರೈತರಿಗೆ ಹಾಗೂ ಕಾರ್ಖಾನೆ ಸಿಬ್ಬಂದಿಯವರಿಗೆ ಸಂಸ್ಥೆಯಿಂದ 2025-26 ಹಂಗಾಮಿಗೆ 50 ಕ್ಕೂ ಹೆಚ್ಚು ವಿಸ್ತರಣಾ ಚಟಿವಟಿಕೆಗಳನ್ನು ಕೈಗೊಳ್ಳಲಾಗಿರುತ್ತದೆ. ಇದರಿಂದ 5000ಕ್ಕೂ ಹೆಚ್ಚು ರೈತರು ಭಾಗವಹಿಸಿ ಸಂಸ್ಥೆಯಿಂದ ಸದುಪಯೋಗ ಪಡೆದಿರುತ್ತಾರೆ. ಇದರಂತೆ ಸಂಸ್ಥೆಯು ಕೃಷಿ ಇಲಾಖೆ ಸಂಯೋಗದಲ್ಲಿ ಅಂತರಜಾಲ ಮುಖಾಂತರ ಕಾರ್ಯಕ್ರಮ ಆಯೋಜಿಸಿ 6000ಕ್ಕೂ ಹೆಚ್ಚು ರೈತರಿಗೆ ಕಬ್ಬು ಬೆಳೆ ಸಂಬಂಧಿತ ತರಬೇತಿಯನ್ನು ನೀಡಲಾಗಿರುತ್ತದೆ.<br>ಸಂಸ್ಥೆಯಿಂದ ಕಬ್ಬು ಅಭಿವೃದ್ಧಿ ಸಂಬಂಧಿಸಿದಂತೆ ತರಬೇತಿ ನೀಡಿದ ವಿಷಯಗಳು ಈ ಕೆಳಕಂಡಂತಿದೆ.
<table>
<tr><td>1.</td><td>ಹೊಸ ಕಬ್ಬಿನ ತಳಿಗಳು ಹಾಗೂ ಅವುಗಳ ಪ್ರಾಮುಖ್ಯತೆ.</td></tr>
<tr><td>2.</td><td>ಮೂರು ಹಂತದ ಬೀಜೋತ್ಪಾದನೆ ಮತ್ತು ಬೀಜೋಪಚಾರದ ಮಹತ್ವ.</td></tr>
<tr><td>3.</td><td>ಅಂಗಾಂಶ ಕೃಷಿಯ ಮಹತ್ವ.</td></tr>
<tr><td>4.</td><td>ಬರ ನಿರ್ವಹಣೆ ಮತ್ತು ಮಾರ್ಗೋಪಾಯಗಳು.</td></tr>
<tr><td>5.</td><td>ರವದೆ ಮತ್ತು ತ್ಯಾಜ್ಯ ನಿರ್ವಹಣೆ ಹಾಗೂ ಅವುಗಳ ಪ್ರಾಮುಖ್ಯತೆ.</td></tr>
<tr><td>6.</td><td>ಕಬ್ಬಿನ ಬೆಳೆಯಲ್ಲಿ ಕೀಟ ಮತ್ತು ರೋಗ ನಿರ್ವಹಣೆ</td></tr>
<tr><td>7.</td><td>ಕಬ್ಬಿನ ಬೆಳೆಯಲ್ಲಿ ಕಳೆ ನಿರ್ವಹಣಾ ಕ್ರಮಗಳು.</td></tr>
<tr><td>8.</td><td>ನೀರು ಮತ್ತು ಪೋಷಕಾಂಶಗಳ ನಿರ್ವಹಣೆ.</td></tr>
<tr><td>9.</td><td>ಸುಸ್ಥಿರ ಮಣ್ಣಿನ ಫಲವತ್ತತೆಯಿಂದ ಅಧಿಕ ಇಳುವರಿಯ ಮಾರ್ಗೋಪಾಯಗಳು.</td></tr>
<tr><td>10.</td><td>ಮಣ್ಣು ಪರೀಕ್ಷೆ ಮತ್ತು ಅದರಿಂದಾಗುವ ಉಪಯೋಗಗಳು.</td></tr>
<tr><td>11.</td><td>ಸಾವಯವ ಕೃಷಿಯ ಪ್ರಾಮುಖ್ಯತೆ.</td></tr>
<tr><td>12.</td><td>ಜೈವಿಕ ಗೊಬ್ಬರಗಳ ಮತ್ತು ಜೈವಿಕ ಪೀಡೆ ನಾಶಕಗಳ ಮಹತ್ವ.</td></tr>
<tr><td>13.</td><td>ಕುಳೆ ಬೆಳೆ ನಿರ್ವಹಣೆ.</td></tr>
<tr><td>14.</td><td>ಅಗಲು ಸಾಲು ಪದ್ಧತಿಯಿಂದ ಆಗುವ ಉಪಯೋಗಗಳು.</td></tr>
<tr><td>15.</td><td>ಹನಿ ನೀರಾವರಿ ಮಹತ್ವ ಮತ್ತು ಕೃಷಿ ಯಾಂತ್ರೀಕರಣ.</td></tr>
<tr><td>16.</td><td>ಹಸೀರೆಲೆ ಗೊಬ್ಬರ ಮತ್ತು ಅಂತರ ಬೆಳೆ ಮಹತ್ವ</td></tr>
</table>
</td></tr>
<tr><td>ಈ)</td><td>ಕಬ್ಬಿನ ಹೆಕ್ಟೇರ್‌ಗೆ ಉತ್ಪಾದಕತೆ (Productivity per Hectare) ಹೆಚ್ಚಿಸಲು ಹಾಗೂ ಕೆಂಪು ಕುರುಡು ರೋಗ, ಸ್ಮಟ್, ವಿಲ್ಟಿಂಗ್ ಮುಂತಾದ ರೋಗಗಳ</td><td>ಕಬ್ಬಿನ ಬೆಳೆಯಲ್ಲಿ ರೋಗಗಳ ನಿಯಂತ್ರಣದ ಬಗ್ಗೆ ರೈತರಿಗೆ ಕೃಷಿ ವಿಜ್ಞಾನ ಕೇಂದ್ರಗಳ (KVK) ಮೂಲಕ ಕಳೆದ ಮೂರು ವರ್ಷಗಳಲ್ಲಿ 17 ತಾಂತ್ರಿಕ ತರಬೇತಿ ಶಿಬಿರಗಳು/ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಸದರಿ ಶಿಬಿರ/ಕಾರ್ಯಾಗಾರಗಳಲ್ಲಿ 748 ರೈತರು</td></tr>
</table>

...3

| | | |
|---|---|---|
| | ನಿಯಂತ್ರಣದ ಬಗ್ಗೆ ರೈತರಿಗೆ ಕೃಷಿ ವಿಜ್ಞಾನ ಕೇಂದ್ರಗಳ (KVK)ಮೂಲಕ ಕಳೆದ ಮೂರು ವರ್ಷಗಳಲ್ಲಿ ಎಷ್ಟು ತಾಂತ್ರಿಕ ತರಬೇತಿ ಶಿಬಿರಗಳು/ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ; ಭಾಗವಹಿಸಿದ ರೈತರ ಸಂಖ್ಯೆ ಎಷ್ಟು; | ಭಾಗವಹಿಸಿರುತ್ತಾರೆ ಎಂದು ಜಂಟಿ ಕೃಷಿ ನಿರ್ದೇಶಕರು, ಬೀದರ್ ಜಿಲ್ಲೆ ಇವರು ತಿಳಿಸಿರುತ್ತಾರೆ. |
| **ಊ)** | ಬೀದರ್ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕೃತ ಕಬ್ಬು ತೂಕಮಾಪನ ಕೇಂದ್ರಗಳ (Weighbridges) ಒಟ್ಟು ಸಂಖ್ಯೆ ಎಷ್ಟು; ತೂಕದ ಅವ್ಯವಹಾರ ತಡೆಯಲು ಡಿಜಿಟಲ್ ತೂಕ ಯಂತ್ರ ಸಿಸಿಟಿವಿ ನಿಗಾ, ಆನ್‌ಲೈನ್ ಡೇಟಾ ಮಾನಿಟರಿಂಗ್ ವ್ಯವಸ್ಥೆಗಳನ್ನು ಅಳವಡಿಸಿರುವ ವಿವರವೇನು; | ಬೀದರ್ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವತಿಯಿಂದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಅಧಿಕೃತ ಕಬ್ಬು ತೂಕ ಮಾಪನ ಕೇಂದ್ರಗಳನ್ನು (Weighbridge) ಅಳವಡಿಸಿರುವುದಿಲ್ಲ.<br>ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರು ವರದಿ ನೀಡಿರುವಂತೆ ಬೀದರ್ ಜಿಲ್ಲೆಯ ಐದು ಸಕ್ಕರೆ ಕಾರ್ಖಾನೆಗಳ ಕಬ್ಬು ತೂಕ ಮಾಪನ ಕೇಂದ್ರಗಳಲ್ಲಿ (WEIGHBRIDGES) ಪಾರದರ್ಶಕತೆ ಕಾಯ್ದುಕೊಳ್ಳಲು ಮತ್ತು ತೂಕದಲ್ಲಿ ಆಗುವ ಅವ್ಯವಹಾರ ತಡೆಗಟ್ಟಲು ವೇ-ಬ್ರಿಡ್ಜ್ ಅಳವಡಿಕೆ ಕಡ್ಡಾಯಗೊಳಿಸಲಾಗಿದೆ ಹಾಗೂ ವೇಬ್ರಿಡ್ಜ್ ಗಳಲ್ಲಿ ಅವ್ಯವಹಾರ ತಡೆಯಲು ಸಿಸಿಟಿವಿ ನಿಗಾ,ಆನ್ ಲೈನ್ ಡೇಟಾ ಮಾನಿಟರಿಂಗ್ ವ್ಯವಸ್ಥೆಯನ್ನು ಅಳವಡಿಸಲಾಗಿರುತ್ತದೆ. |

**ಬೀದರ್ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ವಿವರಗಳು**

| ಕ್ರ.ಸಂ | ಸಕ್ಕರೆ ಕಾರ್ಖಾನೆಗಳ ಹೆಸರು ಮತ್ತು ವಿಳಾಸ | ಲೋಡ್ ಸೆಲ್ |
|---|---|---|
| 1 | ಭಾಲ್ಕೇಶ್ವರ ಶುಗರ್ಸ್ ಲಿ. ಮಡಕಟ್ಟಿ ಕ್ರಾಸ್, ಬಾಜೋಳಗ, ತಾಲ್ಲೂಕು: ಭಾಲ್ಕಿ, ಜಿಲ್ಲೆ: ಬೀದರ್ | ಡಿಜಿಟಲ್ ಲೋಡ್ ಸೆಲ್ |
| 2 | ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಲಿ., ಮೊಗದಲ್ ಗ್ರಾಮ, ಪೋಸ್ಟ್: ಮಾರಕುಂಡಾ, ತಾಲ್ಲೂಕು ಮತ್ತು ಜಿಲ್ಲೆ ಬೀದರ್ | ಡಿಜಿಟಲ್ ಲೋಡ್ ಸೆಲ್ |
| 3 | ದಿ ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ, ಬೀದರ್ | ಡಿಜಿಟಲ್ ಲೋಡ್ ಸೆಲ್ |
| 4 | ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಮಪುರ ಗ್ರಾಮ, (ಜನವಾಡ ಹತ್ತಿರ) ತಾಲ್ಲೂಕು & ಜಿಲ್ಲೆ : ಬೀದರ್ | ಡಿಜಿಟಲ್ ಲೋಡ್ ಸೆಲ್ |
| 5 | ಶ್ರೀ ಭವಾನಿ ಖಂಡಸಾರಿ ಶುಗರ್ಸ್ ಲಿ., ಬರೂರು ಗ್ರಾಮ, ತಾಲ್ಲೂಕು & ಬೀದರ್ | ಡಿಜಿಟಲ್ ಲೋಡ್ ಸೆಲ್ |

| | | |
|---|---|---|
| **ಊ)** | ಕಬ್ಬು ಬೆಳೆ ಹೆಚ್ಚು ನೀರು ಬೇಡುವ ಬೆಳೆಯಾಗಿರುವುದರಿಂದ ಜಿಲ್ಲೆಯಲ್ಲಿ ನೀರಾವರಿ ದಕ್ಷತೆ ಹೆಚ್ಚಿಸಲು ಹಾಗೂ ಹನಿ ನೀರಾವರಿ (Drip Irrigation) ಅಳವಡಿಸಲು ಸರ್ಕಾರದಿಂದ ನೀಡಲಾಗುತ್ತಿರುವ ಸಬ್ಸಿಡಿ ಪ್ರಮಾಣ ಎಷ್ಟು; ಕೇಂದ್ರ ಮತ್ತು ರಾಜ್ಯ ಅನುದಾನದ ಹಂಚಿಕೆ ಪ್ರಮಾಣವೇನು; | ಜಿಲ್ಲೆಯಲ್ಲಿ ನೀರಾವರಿ ದಕ್ಷತೆ ಹೆಚ್ಚಿಸಲು ಹಾಗೂ ಹನಿ ನೀರಾವರಿ (Drip Irrigation) ಅಳವಡಿಸಲು ಸರ್ಕಾರದಿಂದ ನೀಡಲಾಗುತ್ತಿರುವ ಸಬ್ಸಿಡಿ ಪ್ರಮಾಣ 90% ಎಂದು ಜಂಟಿ ಕೃಷಿ ನಿರ್ದೇಶಕರು, ಬೀದರ್ ಜಿಲ್ಲೆ ಇವರು ವರದಿ ಮಾಡಿರುತ್ತಾರೆ. |
| **ಋ)** | ಕಳೆದ ಮೂರು ವರ್ಷಗಳಲ್ಲಿ ಎಷ್ಟು ರೈತರು ಇದರ ಪ್ರಯೋಜನ ಪಡೆದಿದ್ದಾರೆ? (ತಾಲ್ಲೂಕುವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯ 599 ರೈತರು ಇದರ ಪ್ರಯೋಜನ ಪಡೆದಿದ್ದಾರೆ ಎಂದು ಜಂಟಿ ಕೃಷಿ ನಿರ್ದೇಶಕರು, ಬೀದರ್ ಜಿಲ್ಲೆ ಇವರು ವರದಿ ಮಾಡಿರುತ್ತಾರೆ. |

**ಸಂಖ್ಯೆ:** ಸಿಐ 108 ಎಸ್‌ಜಿಎಫ್ 2026

**(ಶಿವಾನಂದ ಎಸ್ ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು